12.	ಥಣಿಸಂದ್ರ	482–07
13.	ಹೆನ್ನೂರು	140–21
14.	ನಾಗಾವರ	127–00
15.	ಸಂಪಿಗೆಹಳ್ಳಿ	256–20
16.	ಹೆಬ್ಬಾಳ	59–14

ಇ) ಅಂತಿಮ ಅಧಿಸೂಚನೆಯಲ್ಲಿ ಸೇರಿರುವ ಯಾವುದೇ ಜಮೀನನ್ನು ಡೀ ನೋಟಿಫಿಕೇಷನ್ ಮಾಡಿರುವುದಿಲ್ಲ.

246 (258) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೀರಪ್ಪನ್ ಕಾರ್ಯಾಚರಣೆಗೆ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ಮಾಡಿದ್ದ ಖರ್ಚು ಎಷ್ಟು?

ಆ) ವೀರಪ್ಪನ್ ಪತ್ತೆಗೆ ಸರ್ಕಾರಿ ಬಹುಮಾನ ಘೋಷಿಸಿತ್ತೆ; ಆ ಬಹುಮಾನ ಮೊತ್ತ ಎಷ್ಟು?

ಇ) ವೀರಪ್ಪನ್ ಹತ್ಯೆ ನಂತರ ಕರ್ನಾಟಕ ಸರ್ಕಾರ ಎಸ್.ಟಿ.ಎಫ್. ಸಿಬ್ಬಂದಿಗೆ ಘೋಷಿಸಿರುವ ಬಹುಮಾನವೆಷ್ಟು?

ಈ) ಇದಕ್ಕೂ ಮೊದಲು ಈ ಸಿಬ್ಬಂದಿಗಳಿಗೆ ನೀಡಬೇಕಾಗಿದ್ದ (ಬಾಕಿ) ಬಹುಮಾನ ಹಣವೆಷ್ಟು; ಇದನ್ನು ಬಾಕಿ ಉಳಿಸಿಕೊಳ್ಳಲು ಕಾರಣಗಳೇನು? (ವಿವರ ನೀಡುವುದು)

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವೀರಪ್ಪನ್ ಕಾರ್ಯಾಚರಣೆಗೆ ತಮಿಳುನಾಡು ಸರ್ಕಾರ ಮಾಡಿದ ವೆಚ್ಚದ ಬಗ್ಗೆ ಮಾಹಿತಿ ಲಭ್ಯವಿಲ್ಲ. ಕರ್ನಾಟಕ ಸರ್ಕಾರ ಈ ಕಾರ್ಯಾಚರಣೆಗಾಗಿ ಡಿಸೆಂಬರ್ 2004 ರವರೆಗೆ ಒಟ್ಟು ರೂ. 37,81,01,748/– ಗಳಷ್ಟು ವೆಚ್ಚ ಮಾಡಿದೆ.

ಆ) ವೀರಪ್ಪನ್ ಪತ್ತೆ ಮತ್ತು ಹತ್ಯೆಗೆ ಕರ್ನಾಟಕ ಸರ್ಕಾರ ರೂ. 5 ಕೋಟಿ ಮೊತ್ತದ ಬಹುಮಾನವನ್ನು ಘೋಷಿಸಿದೆ.

ಇ) ವೀರಪ್ಪನ್ ಹತ್ಯೆಯ ನಂತರ ಎಸ್.ಟಿ.ಎಫ್. ಸಿಬ್ಬಂದಿಗೆ ಸೂಕ್ತ ಬಹುಮಾನ ನೀಡುವ ಬಗ್ಗೆ ಮತ್ತು ಬಹುಮಾನದ ಮೊತ್ತದ ನಿರ್ಧರಣೆಯ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಈ) ಎಸ್.ಟಿ.ಎಫ್. ಕಾರ್ಯಪಡೆಯ ಮನೋಸ್ಥೈರ್ಯವನ್ನು ಹೆಚ್ಚಿಸಲು 1996 ರಲ್ಲಿ ರೂ. 50 ಲಕ್ಷಗಳನ್ನು ಬಿಡುಗಡೆ ಮಾಡಿ ಆಗಿನ ಸಿಬ್ಬಂದಿಗೆ ವಿತರಿಸಲಾಗಿದೆ.

247 (268) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ಅಚ್ಚುಕಟ್ಟು ಪ್ರದೇಶದ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಬಿರುಕು ಕಂಡು ಬಂದಿದೆಯೇ;

ಆ) ಇದುವರೆಗೂ ಎಷ್ಟು ಬಾರಿ ಬಿರುಕು ಕಾಲುವೆಯಲ್ಲಿ ಕಂಡಿದೆ: (ವರ್ಷವಾರು ವಿವರ ನೀಡುವುದು); ಹಾಗೂ

ಇ) ಎಲ್ಲಿ ಬಿರುಕು ಉಂಟಾಗಿದೆ ಹಾಗೂ ಇದರ ಪ್ರಮಾಣ ಎಷ್ಟು;

ಈ) ಇದಕ್ಕೆ ಕಾರಣವೇನು?

ಉ) ಇದರ ತನಿಖೆಗೆ ಸಮಿತಿ ರಚಿಸಲಾಗಿದೆಯೆ;

ಊ) ಹಾಗಿದ್ದಲ್ಲಿ, ಸಮಿತಿ ತನ್ನ ವರದಿಯನ್ನು ಸಲ್ಲಿಸಿದೆಯೆ: (ವರದಿಯ ಪ್ರತಿ ಲಗತ್ತಿಸುವುದು);

ಋ) ಮೊದಲ ಎರಡು ಬಾರಿ ಬಿರುಕು ಕಾಣಿಸಿಕೊಂಡಾಗ ಇದನ್ನು ಯಾವ ರೀತಿ ದುರಸ್ತಿಗೊಳಿಸಿ ಮುಚ್ಚಲಾಗಿತ್ತು;

ಋ) ಇದಕ್ಕಾಗಿ ಖರ್ಚು ಮಾಡಿದ್ದ ಹಣ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) : ಅ) ಕೃಷ್ಣಾ ಅಚ್ಚುಕಟ್ಟು ಪ್ರದೇಶದ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಪ್ರಸ್ತುತ ಯಾವುದೇ ಬಿರುಕು ಕಂಡುಬಂದಿರುವುದಿಲ್ಲ. ಆದರೆ, 2003 ರಲ್ಲಿ ಕಿ.ಮೀ. 60 ರಲ್ಲಿ ಉಂಟಾಗಿದ್ದ ಬಿರುಕನ್ನು ತಜ್ಞರ ಸಮಿತಿಯ ವರದಿ ಆಧರಿಸಿ ದುರಸ್ಥಿ ಕೆಲಸ ಪೂರ್ಣಗೊಳಿಸಲಾಗಿದ್ದು. 2004–05ರ ಹಿಂಗಾರು ಮತ್ತು ಮುಂಗಾರಿನಲ್ಲಿ ಸಮರ್ಪಕವಾಗಿ ನೀರನ್ನು ಕಾಲುವೆಯಲ್ಲಿ ಹರಿಸಲಾಗಿದೆ.

ಆ) ನಾರಾಯಣಪುರ ಎಡದಂಡೆ ಕಾಲುವೆಯ ಕಿ.ಮೀ. 60ರಲ್ಲಿ ಉಂಟಾಗಿದ್ದ ಬಿರುಕುಗಳ ವಿವರ ಈ ಕೆಳಗಿನಂತಿವೆ.

ಇ)

ಕ್ರ.ಸಂ.	ವರ್ಷ	ಕಿ.ಮೀ.
1.	1984	59.360 ರಿಂದ 39.450
2.	1994	59.600 ರಿಂದ 59.680 (1 ರಿಂದ 4 ಅಡಿ ಅಗಲ)
3.	1998	59.000 ರಿಂದ 59.330 (ಸಣ್ಣ ಪ್ರಮಾಣದ ಬಿರುಕು)
4.	2001	59.490 ರಿಂದ 59.620 (ಸಣ್ಣ ಪ್ರಮಾಣದ ಬಿರುಕು)
5.	2003	59.620 ರಿಂದ 59.680 (ಸಣ್ಣ ಪ್ರಮಾಣದ ಬಿರುಕು 4 ರಿಂದ 8 ಸೆಂ.ಮೀ. ಅಗಲ)

ಈ) ನಾರಾಯಣಪುರ ಎಡದಂಡೆ ಕಾಲುವೆಯ ಕಿ.ಮೀ. 60.00 ರಲ್ಲಿ 13,295 ಮೀ. ಎತ್ತರದ ಮಣ್ಣಿನ ಏರಿ ಇರುತ್ತದೆ. ಬಿರುಕು ಉಂಟಾಗಲು ಭಾರತೀಯ ವಿಜ್ಞಾನ ಸಂಸ್ಥೆ (I.I.Sc.)ಯ ತಜ್ಞರುಗಳಾದ ಪ್ರೊ:ಎ. ಶ್ರೀಧರನ್ ಮತ್ತು ಪ್ರೋ.ಕೆ.ಎಸ್. ಸುಬ್ಬಾರಾವ್ ಹಾಗೂ ಶ್ರೀ ಕೆ.ಸಿ.ರೆಡ್ಡಿ ತಜ್ಞರ ಸಮಿತಿಯ ಅಭಿಪ್ರಾಯದಂತೆ "The foremost cause for all the distress observed in the 60th KM is the total uncontrolled seepage through the

embankment and also aided by the use of all kinds of soil" ಎಂದು ತಿಳಿಸಿರುತ್ತಾರೆ.

ಊ) ಕಾಲುವೆಯಲ್ಲಿ ಪ್ರಸ್ತುತದಲ್ಲಿ ಯಾವುದೇ ತೊಂದರೆ ಇಲ್ಲದ ಕಾರಣ ಯಾವುದೇ ತಜ್ಞರ ಸಮಿತಿ ರಚಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಆದರೆ, ಅಕ್ಟೋಬರ್ 2003 ರಲ್ಲಿ ಸದರಿ ನಾಲೆಯಲ್ಲಿ ದೋಷವನ್ನು ಸರಿಪಡಿಸಲು ಶ್ರೀ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಶ್ರೀ. ಡಿ.ಎನ್. ದೇಸಾಯಿ, ಶ್ರೀ ಹೆಚ್.ಎಸ್.ಭಟ್, ಶ್ರೀ ಹೆಚ್.ಎಸ್. ಚಿನಿವಾಲ್, ಶ್ರೀ ಬಿ.ಎಂ. ರಾಮೇಗೌಡ, ಪ್ರೋ:ಎ. ಶ್ರೀಧರನ್ (I.I.Sc.), ಪ್ರೋ.ಕೆ.ಎಸ್. ಸುಬ್ಬಾರಾವ್ (I.I.Sc.), ಕ್ಯಾ:ಎಸ್. ರಾಜಾರಾವ್, ಶ್ರೀ ವ್ಹಿ.ಜಿ. ಬೆಲ್ಲದ್, ಶ್ರೀ ಎಸ್.ಜಿ. ಕೊಯಮತ್ತೂರ್, ಶ್ರೀ ಎಸ್.ಎಸ್. ಮಗದಾಳ್ ಹಾಗೂ ಶ್ರೀ ಟಿ.ರಾಮಅಯ್ಯಂಗಾರ್ ಇವರುಗಳನ್ನೊಳಗೊಂಡ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು.

ಋ) ಸಮಿತಿಯು ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಹಾಗೂ ವರದಿಯ ಪ್ರತಿಯನ್ನು ಲಗತ್ತಿಸಲಾಗಿದೆ.

ಋ) ಮೊದಲೆರಡು ಬಾರಿ ಉಂಟಾದ ಬಿರುಕಿನ ಚೈನೇಜ್ ನಲ್ಲಿ ನೆಲಮಟ್ಟದಿಂದ 3ಮೀ ಮಣ್ಣನ್ನು ತೆಗೆದು ಅದರ ಮೇಲೆ ಉತ್ತಮ ಗುಣಮಟ್ಟದ ಗ್ರಾವೆಲ್ ನ್ನು ಹಾಕಿ ಅದರ ಮೇಲೆ ಕಲ್ಲು ಮಿಶ್ರಿತ ಮಣ್ಣನ್ನು ಹಾಕಿ ನಂತರ ಏರಿ ಭಾಗದ 'ಎ' ವಲಯ ಮತ್ತು 'ಜಿ' ವಲಯದ ನಡುವ 0.990 ಮೀ ಪಿಲ್ಟರ್ ಮೀಡಿಯವನ್ನು ಅಳವಡಿಸಿ ನಂತರ 1:3 ಎತ್ತರದ ಏರಿ ಭಾಗಕ್ಕೆ ರಾಕ್‌ಟೋ ಅನ್ನು ನಿರ್ಮಿಸಿ 4 ಮೀ ಏರ್ಮನ್ನು. ಹಾಕಿ ಕಾಮಗಾರಿಯನ್ನು ಪೂರ್ಣಗೊಳಿಸಲಗಿರುತ್ತದೆ.

ಋ) 1984 ರಲ್ಲಿ ರೂ. 35 ಲಕ್ಷ ಖರ್ಚು ಮಾಡಲಾಗಿದೆ.
1994 ರಲ್ಲಿ ರೂ. 100 ಲಕ್ಷ ಖರ್ಚು ಮಾಡಲಾಗಿದೆ.

249 (5) : ಶ್ರೀ ಜಯಪ್ರಕಾಶ್ ಹೆಗ್ಡೆ.ಕೆ. (ಬ್ರಹ್ಮಾವರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ನಿರ್ಮಾನ ಹಂತದಲ್ಲಿರುವ ಮೇಲು ಸೇತುವೆಗಳೆಷ್ಟು; ಸಂಪೂರ್ಣ ವಿವರಗಳನ್ನು ನೀಡುವುದು;

ಆ) ಕೆಲವು ಮೇಲು ಸೇತುವೆಗಳ ನಿರ್ಮಾಣ ಕಾರ್ಯದ ವಿಳಂಬದಿಂದಾಗಿ ಸಂಚಾರದ ಅವ್ಯವಸ್ಥೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು;

ಈ) ಮೇಲು ಸೇತುವೆ ನಿರ್ಮಾಣ ಕಾರ್ಯಕ್ಕೆ ನೀಡಿರುವ ಹಣವೆಷ್ಟು ಹಾಗೂ ಮೇಲು ಸೇತುವೆಗಳ ನಿರ್ಮಾಣ ಕಾಮಗಾರಿಗಳು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) I) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 3 ಮೇಲು ಸೇತುವೆಗಳನ್ನು ನಿರ್ಮಿಸುತ್ತಿದ್ದು, ಅವುಗಳ ವಿವರ ಕೆಳಕಂಡಂತೆ ಇದೆ:-

(1) ಏರ್‌ಪೋರ್ಟ್ ರಸ್ತೆ-ಒಳವರ್ತುಲ ರಸ್ತೆ ಕೊಡುವಿಕೆ
(2) ಜಯದೇವ ಹೃದ್ರೋಗ ಕೇಂದ್ರದ ಬಳಿ